**ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ), ಚನ್ನಪಟ್ಟಣ**

**10 ನೇ ತರಗತಿ ತೃತೀಯ ಭಾಷೆ ಕನ್ನಡ**

**ಶಿಕ್ಷಕರು: ಸಾವಿತ್ರಿ ಈಶ್ವರ್ ಭಟ್**

---

## I. ಬಹು ಆಯ್ಕೆ ಪ್ರಶ್ನೆಗಳು:

1.ದೇವಾಲಯ ಈ ಪದವು ಈ ಸಂಧಿಗೆ ಉದಾಹರಣೆ-----------------

ಎ) ಗುಣ ಸಂಧಿ ಬಿ)ಲೋಪಸಂಧಿ **ಸಿ)ಸವರ್ಣದೀರ್ಘಸಂಧಿ** ಡಿ)ಯಣ್ ಸಂಧಿ

2.ದೀಪಾಲಂಕಾರ ಈ ಪದವು ಈ ಸಂಧಿಗೆ ಉದಾಹರಣೆ-------------

ಎ) ಗುಣ ಸಂಧಿ ಬಿ)ವೃದ್ಧಿ ಸಂಧಿ **ಸಿ)ಸವರ್ಣದೀರ್ಘಸಂಧಿ** ಡಿ)ಯಣ್ ಸಂಧಿ

3.ಊಟವಾಯಿತು ಈ ಪದವು ಈ ವಾಕರಣಾಂಶಕ್ಕೆ ಸೇರಿದೆ-------------

ಎ)ಲೋಪ ಸಂಧಿ ಬಿ)**ಆಗಮ ಸಂಧಿ** ಸಿ)ಆದೇಶ ಸಂಧಿ ಡಿ)ಗುಣಸಂಧಿ

4.ಅರಿವಿಲ್ಲ ಈ ಪದವು ಈ ಸಂಧಿಗೆ ಉದಾಹರಣೆ---------------

ಎ)ಲೋಪ ಸಂಧಿ ಬಿ)**ಆಗಮ ಸಂಧಿ** ಸಿ)ಆದೇಶ ಸಂಧಿ ಡಿ)ಗುಣಸಂಧಿ

5.ಪರಿಚಿತ ಪದದ ವಿರುದ್ಧ ಪದ----------

ಎ)ಪರಿಚಯ ಬಿ)**ಅಪರಿಚಿತ** ಸಿ)ಪರಿಣಿತ ಡಿ)ಪರಾಜಿತ

6.ಮಿತ್ರ ಪದದ ವಿರುದ್ಧ ಪದ----------------

ಎ)ಗೆಳೆಯ ಬಿ)ಅಮಿತ್ರ **ಸಿ)ಶತ್ರು** ಡಿ)ಸಖ

7.ಗುಂಪಿಗೆ ಸೇರದ ಪದ-------------

ಎ)ಮರ ಬಿ)ಕಾರು ಸಿ)ನಗರ **ಡಿ)ಮನೆಗಳು**

7.ಗುಂಪಿಗೆ ಸೇರದ ಪದ----------------

ಎ)ದಿನಗಳು ಬಿ)ಹಣ್ಣುಗಳು **ಸಿ)ಕಣ್ಣು** ಡಿ)ನಗರಗಳು

8.ಹುಡುಗ ಈಪದದ ಸ್ರೀಲಿಂಗ ರೂಪ------------

ಎ)ಹುಡುಗರು ಬಿ)ಹುಡುಗನು **ಸಿ)ಹುಡುಗಿ** ಡಿ)ಬಾಲಕಿ

9.ಅಣ್ಣ ಪದದ ಈ ಪದದ ಬಹುವಚನ ರೂಪ-------------

ಎ)ಅಣ್ಣಗಳು ಬಿ)ಅಣ್ಣರು **ಸಿ)ಅಣ್ಣಂದಿರು** ಡಿ)ಅಕ್ಕಂದಿರು

10.ಗುಂಪಿಗೆ ಸೇರದ ಪದ------------------

ಎ)ಬಾಲಕ ಬಿ)ಹುಡುಗ ಸಿ)ಅಣ್ಣ **ಡಿ)ಹುಡುಗಿ**

11.'ದೇಶ ಸುತ್ತು: ಕೋಶ ಓದು' ಇದು ಒಂದು ---------------

**ಎ)ಗಾದೆಮಾತು** ಬಿ)ಸಂಧಿಪದ ಸಿ)ಪಡೆ ನುಡಿ ಡಿ)ಸಮಾಸಪದ

12.ಪೊಲೀಸ್  ಪದವು ಈ ಭಾಷೆಯ ಪದ----------------

ಎ)ಹಿಂದಿ ಬಿ)ಕನ್ನಡ ಸಿ)ಇಂಗ್ಲಿಷ್ ಡಿ)ಉರ್ದು

13.ಈ ಪದಗಳಲ್ಲಿ ಗುಂಪಿಗೆ ಸೇರದ ಪದ---------------------

ಎ)ಕಂದ ಬಿ)ಕಂಪು ಸಿ)ಕಂಸ **ಡಿ)ದುಃಖ**

14.ಈ ಪದಗಳಲ್ಲಿ ಅನುಸ್ವಾರಯುಕ್ತಪದ-------------

**ಎ)ಕಂಕಣ** ಬಿ)ಪುನಃ ಸಿ)ಸ್ವತಃ ಡಿ)ನಮಃ

15 ಇವುಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರ ಪದ----------------

ಎ)ಅಮ್ಮ ಬಿ)ಅಕ್ಕ ಸಿ)ಅಪ್ಪ **ಡಿ)ಪುಸ್ತಕ**

16.ಕನ್ನಡದಲ್ಲಿರುವ ಒಟ್ಟು ಸ್ವರಗಳ ಸಂಖ್ಯೆ-------------------

ಎ)23 **ಬಿ)13** ಸಿ)07 ಡಿ)49

17ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಗಳ ಸಂಖ್ಯೆ

ಎ)44 ಬಿ)25 **ಸಿ)34** ಡಿ)01

18.ಙ,ಞ,ಣ,ನ,ಮ ಇವು -------------

ಎ)ಯೋಗವಾಹಗಳು ಬಿ)ಸ್ವರಗಳು **ಸಿ)ಅನುನಾಸಿಕಗಳು** ಡಿ)ಗುಣಿತಾಕ್ಷರಗಳು

19.ಕ್+ಅ=ಕ:ಕ್+ಉ=------------------

ಎ)ಕೆ ಬಿ)ಕಾ ಸಿ)ಕಿ **ಡಿ)ಕು**

20.ಕ್,ಗ್,ಚ,ಜ,ಟ,ಡ,ತ,ದ,ಪ,ಬ, ಇವು ---------------

**ಎ)ಅಲ್ಪಪ್ರಾಣಗಳು** ಬಿ)ಮಹಾಪ್ರಾಣಗಳು ಸಿ)ಅನುನಾಸಿಕಗಳು ಡಿ)ಸ್ವರಗಳು

22.ಕಟ್ಟತ್ತೇವ ಈಪದದ ಗ್ರಾಂಥಿಕ ರೂಪ ಬರೆಯಿರಿ:--------------

ಎ)ಕಟ್ಟುತ್ತೇನೆ ಬಿ)ಕಟ್ಬೋಣ **ಸಿ)ಕಟ್ಟುತ್ತೇವೆ** ಡಿ)ಕಟ್ಟುತ್ತಾನೆ

23.ತುಳಿಯುತೇವ ಈಪದದ ಗ್ರಾಂಥಿಕ ರೂಪ ಬರೆಯಿರಿ:-------------

ಎ)ತುಳಿಯುವೆ **ಬಿ)ತುಳಿಯುತ್ತೇವೆ** ಸಿ)ತುಳಿಯುತ್ತೇನೆ ಡಿ)ತುಳಿದೆ

24.ನಿರಾಡಂಬರ ಈಪದದ ವಿರುದ್ಧ ಪದ-----------------

**ಎ)ಆಡಂಬರ** ಬಿ)ನೀಡಂಬರ ಸಿ)ಡಂಬರ ಡಿ)ಬರ

25.ಕವಿ ಈ ಪದಕ್ಕೆ ತದ್ಭವ ಪದ ಬರೆಯಿರಿ:-----------

ಎ)ಕಾವ್ಯ **ಬಿ)ಕಬ್ಬಿಗ** ಸಿ)ಲೇಖಕ ಡಿ)ಕಬ್ಬ

26.ಕಾವ್ಯ ಈ ಪದಕ್ಕೆ ತದ್ಭವ ಪದ ಬರೆಯಿರಿ:-----------

ಎ)ಕವನ ಬಿ)ಕಬ್ಬಿಗ ಸಿ)ಲೇಖಕ **ಡಿ)ಕಬ್ಬ**

27.ನವೋದಯ ಈ ಪದವು ಈ ಸಂಧಿಗೆ ಉದಾಹರಣೆ-----------------

ಎ)**ಗುಣಸಂಧಿ** ಬಿ)ಯಣ್ ಸಂಧಿ ಸಿ)ಲೋಪಸಂಧಿ ಡಿ)ಆದೇಶ ಸಂಧಿ

28.ನದಿ ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ:--------------

ಎ)ಅಂಕಿತ ನಾಮ **ಬಿ)ರೂಢನಾಮ** ಸಿ)ಭಾವನಾಮ ಡಿ)ಅನ್ವರ್ಥಕನಾಮ

29.ದಿಕ್ಕುಗಳನ್ನು ಸೂಚಿಸುವ ಪದಗಳನ್ನು ಹೀಗೆನ್ನುತ್ತಾರೆ:------------------

ಎ)ಗುಣವಾಚಕ **ಬಿ)ದಿಗ್ವಾಚಕ** ಸಿ)ಭಾವನಾಮ ಡಿ)ಪ್ರಕಾರವಾಚಕ

30.ವ್ಯಾಪಾರಿ ಈ ಪದವು ಈ ವ್ಯಾಕಣಾಂಶಕ್ಕೆ ಸೇರಿದೆ:----------------

ಎ)ಅಂಕಿತ ನಾಮ **ಬಿ)ಅನ್ವರ್ಥಕನಾಮ** ಸಿ)ಭಾವನಾಮ ಡಿ)ರೂಢನಾಮ

31.ನಾನು ಹತ್ತನೇ ತರಗತಿಯಲ್ಲಿ ಓದುತ್ತಿದ್ದೇನೆ ಇಲ್ಲಿರುವ ಸರ್ವನಾಮ ಪದ:----------

**ಎ)ನಾನು** ಬಿ)ಹತ್ತು ಸಿ)ತರಗತಿ ಡಿ)ಓದು

32.ಇವುಗಳಲ್ಲಿ ಮಧ್ಯಮ ಪುರುಷ ಸರ್ವನಾಮ ಪದ:-------------

ಎ)ನಾನು ಬಿ)ಅವನು **ಸಿ)ನೀನು** ಡಿ)ಅದು

33.ಇವುಗಳಲ್ಲಿ ಆತ್ಮಾರ್ಥಕ ಸರ್ವನಾಮ ಪದ:----------------

ಎ)ಅವರು **ಬಿ)ತಾನು** ಸಿ)ನೀನು ಡಿ)ಅವು

34.ಮಗು ಪದದ ಬಹುವಚನ ರೂಪ:--------------------

ಎ)ಮಗುಗಳು ಬಿ)ಮಗಳು ಸಿ)ಮಗ **ಡಿ)ಮಕ್ಕಳು**

35.ಸಪ್ತಮೀ ವಿಭಕ್ತಿ ಪ್ರತ್ಯಯ:----------------

ಎ)ಅನ್ನು ಬಿ)ಇಂದ **ಸಿ)ಅಲ್ಲಿ** ಡಿ)ಅ

36.ದ್ವಿತೀಯಾ ವಿಭಕ್ತಿ ಪ್ರತ್ಯಯ:----------------------

ಎ)ಇಂದ ಬಿ)ಅಲ್ಲಿ **ಸಿ)ಅನ್ನು** ಡಿ)ಗೆ

37.ತ್ರಿಪದಿಯಲ್ಲಿರುವ ಸಾಲುಗಳ ಸಂಖ್ಯೆ:--------------

ಎ)4 **ಬಿ)3** ಸಿ)6 ಡಿ)5

38.ಭೂಮಿಗೆ ಇರುವ ಸಮನಾರ್ಥಕ ಪದ:-----------------

ಎ)ತಾಯಿ ಬಿ)ಗಾಳಿ **ಸಿ)ಪೃಥ್ವಿ** ಡಿ)ಚಂದ್ರ

39.ಭೂಮಿ ಪದದ ತದ್ಭವ ರೂಪ:----------------

**ಎ)ಬುವಿ** ಬಿ)ಧರೆ ಸಿ)ಪೃಥ್ವಿ ಡಿ)ಆಕಾಶ

40.ಗೌರಿಯ ಮುಖ ಕಮಲದಂತೆ ಅರಳಿತು ಇಲ್ಲಿರುವ ಅಲಂಕಾರ:----------

ಎ)ರೂಪಕ ಬಿ)ದೃಷ್ಟಾಂತ **ಸಿ)ಉಪಮಾ** ಡಿ)ಯಮಕ

41ಸೀತೆಯ ಮುಖ ಕಮಲದಂತೆ ಅರಳಿತು ಇಲ್ಲಿರುವ ಉಪಮಾನ:----------

ಎ)ಸೀತೆ ಬಿ)ಮುಖ **ಸಿ)ಕಮಲ** ಡಿ)ಅರಳಿತು

42.ಉಪಮಾನ ಉಪಮೇಯಗಳಲ್ಲಿ ಹೋಲಿಕೆ ಕಂಡು ಬಂದರೆಅದು ಈ ಅಲಂಕಾರ:------------------

**ಎ)ಉಪಮಾ** ಬಿ)ರೂಪಕ ಸಿ)ಯಮಕ ಡಿ)ದೃಷ್ಟಾಂತ

43.ಬಡಗಣ ಎಂದರೆ ಈ ದಿಕ್ಕು:-----------

ಎ)ಪೂರ್ವ ಬಿ)ಪಶ್ಚಿಮ **ಸಿ)ಉತ್ತರ** ಡಿ)ದಕ್ಷಿಣ

44.'ನೆತ್ತರೊಂದೆ' ಇದು ಈ ಸಂಧಿಗೆ ಉದಾಹರಣೆ:----------------

ಎ)ಆಗಮಸಂಧಿ ಬಿ)ಆದೇಶ ಸಂಧಿ **ಸಿ)ಲೋಪಸಂಧಿ** ಡಿ)ಗುಣಸಂಧಿ

45.ಜೇನಿನಂತೆ ಸಿಹಿ ಇಲ್ಲಿರುವ ಅಲಂಕಾರ:----------------

ಎ)ರೂಪಕ **ಬಿ)ಉಪಮಾ** ಸಿ)ಯಮಕ ಡಿ)ದೃಷ್ಟಾಂತ

46.ಈ ಕೆಳಗಿನ ಪದಗಳಲ್ಲಿ ದ್ವಿರುಕ್ತಿ ಪದ:-------------------

**ಎ)ಬೇಗಬೇಗ** ಬಿ)ಸರಸರ ಸಿ)ಧಗಧಗ ಡಿ)ಪಟಪಟ

47.ಹಣ್ಣುಹಂಪಲು ಈ ಪದ ಈ ವ್ಯಾಕರಣಾಂಶಕ್ಕೆ ಸೇರಿದೆ:--------------

ಎ)ಅನುಕರಣಾವ್ಯಯ **ಬಿ)ಜೋಡುನುಡಿ** ಸಿ)ದ್ವಿರುಕ್ತಿ ಡಿ)ಪಡೆನುಡಿ

48.ಈ ಕೆಳಗಿನ ಪದಗಳಲ್ಲಿ ಅನುಕರಣಾವ್ಯಯ ಪದ:---------------

**ಎ)ಢಣಢಣ** ಬಿ)ಆಟಪಾಟ ಸಿ)ನಡೆನಡೆ ಡಿ)ನೋಡಿನೋಡಿ

49.ವಿದ್ಯಾಧರ ಈ ಪದದ ತದ್ಭವ ರೂಪ:-----------------

ಎ)ಬಿಜ್ಜೆ ಬಿ)ವಿದ್ಯಾಧರೆ **ಸಿ)ಬಿಜ್ಜೋದರ** ಡಿ)ವಿದ್ಯೆ

50.ಇವುಗಳಲ್ಲಿ ಗುಂಪಿಗೆ ಸೇರದ ಪದ:-------------------

**ಎ)ವೈಶಾಖ** ಬಿ)ಕೊಡಲಿ ಸಿ)ಅಂಕುಸ ಡಿ)ಸಸಿ

51.ಅರಮನೆ ಇದು ಈ ಸಮಾಸಕ್ಕೆ ಉದಾಹರಣೆ:------------------

**ಎ)ತತ್ಪುರುಷ** ಬಿ)ದ್ವಂದ್ವ ಸಿ)ದ್ವಿಗು ಡಿ)ಅಂಶಿ

52ನಾಮಪದದ ಬದಲಾಗಿ ಬಳಸುವ ಪದ:--------------------

**ಎ)ಸರ್ವನಾಮ** ಬಿ)ರೂಢನಾಮ ಸಿ)ಭಾವನಾಮ ಡಿ)ಅಂಕಿತನಾಮ

53.ನಾನು ಪದವು ಈ ಸರ್ವನಾಮಕ್ಕೆ ಉದಾಹರಣೆ;------------------

ಎ)ಮಧ್ಯಮಪುರುಷ **ಬಿ)ಉತ್ತಮಪುರುಷ** ಸಿ)ಪ್ರಥಮಪುರುಷ ಡಿ)ದ್ವಿತೀಯ ಪರುಷ

54.ಕ್ರಿಯಾಪದದ ಮೂಲರೂಪ:----------------

ಎ)ನಾಮಪದ **ಬಿ)ಧಾತು** ಸಿ)ಕ್ರಿಯೆ ಡಿ)ಸರ್ವನಾಮ

55.ಈಗ ಮಳೆ ಪಟಪಟನೆ ಸುರಿಯುತ್ತಿದೆ ಇಲ್ಲಿರುವ ಅನುಕರಣಾವ್ಯಯ-----------------

ಎ)ಈಗ ಬಿ)ಮಳೆ **ಸಿ)ಪಟಪಟನೆ** ಡಿ)ಸುರಿಯುತ್ತಿದೆ

56.ಒಳ್ಳೆಯ ಈ ಪದವು ನಾಮಪದದ ಈ ಗಂಪಿಗೆ ಸೇರಿದೆ

ಎ)ಸಂಖ್ಯಾವಾಚಕ **ಬಿ)ಗುಣವಾಚಕ** ಸಿ)ಪರಿವಾಣ ವಾಚಕ ಡಿ)ದಿಗ್ವಾಚಕ

57. ಮನೆ ಪದವು ಈ ವಚನಕ್ಕೆ ಉದಾಹರಣೆ:---------------

**ಎ)ಏಕವಚನ** ಬಿ)ಬಹುವಚನ ಸಿ)ದ್ವಿವಚನ ಡಿ)ಅನೇಕವಚನ

58.ಎರಡಕ್ಕಿಂತ ಹೆಚ್ಚುವಸ್ತುಗಳನ್ನು ಸೂಚಿಸುವ ಪದ:-----------------

**ಎ)ಬಹುವಚನ** ಬಿ)ಏಕವಚನ ಸಿ)ನಾಮಪದ ಡಿ)ದ್ವಿವಚನ

59.ಹಣ್ಣು ಹಂಪಲು ಇದು ಒಂದು---------------

ಎ)ಅನುಕರಣಾವ್ಯಯ ಬಿ)ದ್ವಿರುಕ್ತಿ **ಸಿ)ಜೋಡುನುಡಿ** ಡಿ)ನುಡಿಗಟ್ಟು

60.ಬರುತ್ತಾನೆ ಈ ಕ್ರಿಯಾಪದದ ಭೂತಕಾಲ ರೂಪ:-------------

ಎ)ಬರುವನು **ಬಿ)ಬಂದನು** ಸಿ)ಬಂದಾನು ಡಿ)ಬರಲಿಲ್ಲ

61.ಒಂದು ಅಥವಾ ಅನೇಕ ವಾಕ್ಯಗಳು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದರೆ:----------------

ಎ)ಸಾಮಾನ್ಯ ವಾಕ್ಯ ಬಿ)ವಿಶೇಷವಾಕ್ಯ **ಸಿ)ಮಿಶ್ರವಾಕ್ಯ** ಡಿ)ಸಂಯೋಜಿತವಾಕ್ಯ

62.ನಿನ್ನ ಊರು ಯಾವುದು ಈವಾಕ್ಯದ ಕೊನೆಯಲ್ಲಿ ಬಳಸಬೇಕಾದ ಚಿಹ್ನೆ:-----------------

**ಎ)ಪ್ರಶ್ನಾರ್ಥಕ** ಬಿ)ಭಾವಸೂಚಕ ಸಿ)ಆವರಣ ಡಿ)ಉದ್ಧರಣ

63.ತಂದೆಯವರಿಗೆ ಪತ್ರ ಬರೆಯುವಾಗ ಆರಂಭದಲ್ಲಿ ಬಳಸುವ ಸಂಬೋಧನೆ:-------------

ಎ)ಪೂಜ್ಯ **ಬಿ)ತೀರ್ಥರೂಪ** ಸಿ)ಮಾತೃಶೀ ಡಿ)ಪ್ರೀತಿಯ.

## ❖ ಲಾಕಪ್ಪಿನಲ್ಲಿ ಒಂದು ರಾತ್ರಿ – ಗೊರೂರು ರಾಮಸ್ವಾಮಿ ಅಯ್ಯಂಗಾರ್

**1.**ಬೆಳಗಾಗುವ ವೇಳೆಗೆ ಕಾಲು ಕೊರಡಾಗಬಹುದೆಂಬ ಭಾವನೆಯು ಗೊರೂರರ ಮನಸ್ಸಿಗೆ ಏಕೆ ಬಂದಿತು.

**ರಾತ್ರಿ ತುಂಬಾ ಶೀತವಿರುವುದರಿಂದ ಮತ್ತು ಅವರ ಹತ್ತಿರ ಕಡಿಮೆ ಬಟ್ಟೆ ಇರುವುದರಿಂದ.**

**2.**ಭಾರತದಲ್ಲಿರುವ ಅಲೆಮಾರಿಗಳು ರಾತ್ರಿ ವೇಳೆಯಲ್ಲಿ ತಂಗಲು ಇರುವ ಸ್ಥಳಗಳಾವುವು?

**ಛತ್ರ, ಧರ್ಮ ಶಾಲೆ,ದೇವಾಲಯ, ತೋಪು, ಅಂಗಡಿ, ವಿಮಾನ ನಿಲ್ದಾಣ ಇತ್ಯಾದಿ.**

**3.**ಅಮೇರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿ ತಂಗುವಂತಿಲ್ಲ ಏಕೆ?

**ಏಕೆಂದರೆ ಅಲೆಮಾರಿಗಳೆಂದು ಲಾಕಪ್ಪಿಗೆ ಹಾಕುತ್ತಾರೆ.**

4.ಮಿನಿ ಪೊಲೀಸ್ ನಗರದಲ್ಲಿ ದಾರಿ ತಪ್ಪಿದ ಗೊರೂರರು ರಾತ್ರಿ ಕಳೆಯಲು ಹೋಟೆಲ್ಲಿಗೆ ಹೋಗಲಾಗಲಿಲ್ಲ ಏಕೆ?

**ಏಕೆಂದರೆ ಅವರ ಹತ್ತಿರ ಕಡಿಮೆ ಹಣ(ಎರಡು ಡಾಲರ್)ವಿತ್ತು**

5.ಅಮೇರಿಕಾದ ಪೊಲಿಸರು ಭಾರತದ ಪೊಲೀಸರ ಬಗೆಗೆ ಗೊರೂರರಲ್ಲಿ ಯಾವ ವಿಚಾರವನ್ನು ತಿಳಿದು ಕೊಂಡರು.

**ಭಾರತದ ಪೊಲೀಸರ ಸಂಬಳ ಸಾರಿಗೆ ವಿಷಯ ತಿಳಿದುಕೋಡರು.**

.

## ❖ ಕಟ್ಟತೇವ ನಾವು ಸತೀಶ ಕುಲಕರ್ಣಿ

1. ಕಟ್ಟುತೇವ ನಾವು ಕವಿತೆಯಲ್ಲಿ ಕವಿ ಯಾವೆಲ್ಲ ಮನಸ್ಸುಗಳನ್ನು ಕಟ್ಟುತ್ತೇವೆ ಎಂದು ಹೇಳುತ್ತಾರೆ?

**ಒಡೆದ ಮನಸ್ಸುಗಳನ್ನು ,ಕಂಡ ಕನಸ್ಸುಗಳನ್ನು ಕಟ್ಟುತ್ತೇವೆ ಎಂದು ಕವಿ ಹೇಳುತ್ತಾರೆ.**

2. ಎಂತಹ ಬಾಳನ್ನು ಕಟ್ಟುತ್ತೇವೆ ಎಂದು ಕಟ್ಟತ್ತೇವ ನಾವು ಕವಿತೆ ಭರವಸೆ ನೀಡುತ್ತದೆ?

**ಜಾತಿ ಇಲ್ಲದ ಭೀತಿ ಇಲ್ಲದ ಬಾಳನ್ನು ಕಟ್ಟುತ್ತೇವೆ ಎಂದು ಕವಿತೆ ಭರವಸೆ ನೀಡುತ್ತದೆ.**

3. ಕಟ್ಟುತೇವ ನಾವು ಕವಿತೆಯಲ್ಲಿ ಬರುವ ಕ್ರಾಂತಿಕಾರಿಗಳು ಎಂತಹ ಕುಂಡವನ್ನು ಹೊತ್ತಿದ್ದೇವೆಂದು ಹೇಳುತ್ತಾರೆ?

**ಕ್ರಾಂತಿ ಕೆಂಡದ ಕುಂಡವನ್ನು ಹೊತ್ತಿದ್ದೇವೆಂದು ಹೇಳುತ್ತಾರೆ.**

4. ಮನುಕುಲವನ್ನು ಹೇಗೆ ಕಟ್ಟುತ್ತೇವಂದು ಕವಿ ಕಟ್ಟುತೇವ ನಾವು ಕವಿತೆಯಲ್ಲಿ ಹೇಳಿದ್ದಾರೆ?

**ಕುಲವೆನ್ನದ ಮನುಕುಲವನ್ನು ಕಟ್ಟುತ್ತೇವೆ ಎಂದುಕವಿ ಕುಲ ಕರ್ಣಿಯವರುಹೇಳಿದ್ದಾರೆ.**

5. ಕಟ್ಟುತೇವ ನಾವು ಕವಿತೆಯಲ್ಲಿನ ಕ್ರಾಂತಿಕಾರಿಗಳ ಕಾಲುಗಳು ಏಕೆ ರಕ್ತವಾಗಿವೆ?

**ಮುಳ್ಳು ತುಳಿದಿದ್ದರಿಂದ ಅವರ ಕಾಳುಗಳು ರಕ್ತವಾಗಿವೆ.**

6. ಕುಲಕರ್ಣಿಯವರು ಕ್ರಾಂತಿಯನ್ನು ಯಾವುದಕ್ಕೆ ಹೋಲಿಸಿದ್ದಾರೆ?

**ಕುಲಕರ್ಣಿಯವರು ಕ್ರಾತಿಯನ್ನು ಕೆಂಡಕ್ಕೆ ಹೋಲಿಸಿದ್ದಾರೆ.**

7. ಸತೀಶ ಕುಲಕರ್ಣಿಯವರು ಎಂತಹ ನಾಡನ್ನು ಕಟ್ಟುತ್ತೇವೆಂದು ಹೇಳಿದ್ದಾರೆ?

**ಸತೀಶ ಕುಲಕರ್ಣಿಯವರು ನೂರು ಮನಸಿನ ಕೋಟಿ ಕನಸಿನ ಹಾಡ ಕಟ್ಟತ್ತೇವ ಎಂದು ಹೇಳಿದ್ದಾರೆ.**

❖ **ಕೊಡಗಿನ ಗೌರಮ್ಮ ಮ.ನ. ಮುಕ್ತಾಯಿ**

**1** ಆಧುನಿಕ ಕನ್ನಡ ಸಾಹಿತ್ಯದ ಮೊದಲ ಸಮಕಾಲೀನ ಸಂವೇದನಾಶೀಲ ಲೇಖಕಿಯರು ಯಾರು ಯಾರು?

. **ನಂಜನಗೂಡು ತಿರುಮಲಾಂಬ, ಬೆಂಗಳೂರಿನ ಆರ್. ಕಲ್ಯಾಣಮ್ಮ,ತಿರುಮಲೆ ರಾಜಮ್ಮ, ದಕ್ಷಿಣಕನ್ನಡದ ಸರಸ್ವತಿಬಾಯಿ ರಾಜವಾಡೆ ಕೊಡಗಿನ ಗೌರಮ್ಮ ಮುಂತಾದವರು.**

**2.**ಕೊಡಗಿನ ಗೌರಮ್ಮನವರ ವಿವಾಹವು ಯಾರೊಡನೆ ಆಯಿತು?

**ಕೊಡಗಿನ ಗೌರಮ್ಮನವರ ವಿವಾಹವು ಶ್ರೀ ಬಿ.ಟಿ. ಗೋಪಾಲಕೃಷ್ಣಯ್ಯನವರೊಡನೆಆಯಿತು.**

**3.**ಮಂಜುನಾಥಯ್ಯನವರ ಮನೆಯಲ್ಲಿ ಆಗಾಗ್ಗೆ ಮೊಕ್ಕಾಂ ಹೂಡುತಿದ್ದ ಸಾಹಿತಿಗಳು ಯಾರು ಯಾರು?

**ಶಿವರಾವ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್,ದ.ರಾ ಬೇಂದ್ರೆಮುಂತಾದವರು ಮೊಕ್ಕಾಂಃಡುತಿದ್ದ ಸಾಹಿತಿಗಳು**

4.ಕೊಡಗಿನ ಗೌರಮ್ಮನವರು ಯಾವುದರ ಬಗೆಗೆ ಅಪಾರ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು?

**ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ' ಆಸಕ್ತಿಯನ್ನು ಹೊಂದಿದ್ದರು.**

**5.**ಕೊಡಗಿನ ಗೌರಮ್ಮನವರು ಅಕಾಲಿಕ ಮರಣ ಹೊಂದಿದ್ದೇಕೆ?

**ಗೌರಮ್ಮನವರು ಹಟ್ಟಿಹೊಳೆಯಲ್ಲಿ ಈಜಾಡುವಾಗ ಸುಳಿಗೆ ಸಿಕ್ಕಿ ಅಕಾಲ ಮರಣಕ್ಕೆ ತುತ್ತಾದರು.**

6.ಆರ್. ಕಲ್ಯಾಣಮ್ಮ ಯಾರು?

**ಆರ್. ಕಲ್ಯಾಣಮ್ಮನವರು ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿ.**

❖ **ಭೂಮಿ ತಾಯ ಕುಡಿಗಳು ಕೆ ಎಸ್. ನಿಸಾರ್ ಅಹಮದ್**

**1.**ಭೂಮಿತಾಯಕುಡಿಗಳು ಪದ್ಯದಲ್ಲಿ ಕವಿಗಳು ಯಾರು ಯಾರು ಒಂದೆ ಎಂದು ಹೇಳಿದ್ದಾರೆ.

**ಭೂಮಿತಾಯಕುಡಿಗಳು ಪದ್ಯದಲ್ಲಿ ಕವಿಗಳು ನಾವು ನೀವು ಅವರು ಇವರು ಎಲ್ಲರು ಒಂದೆ ಎಂದು ಹೇಳಿದ್ದಾರೆ.**

**2.**ಎಲ್ಲರೂ ಇಂದೇ ಏನೆಂದು ಪಣ ತೊಡಬೇಕೆಂದು ಕವಿ ನಿಸಾರ್ ಅಹಮದ್ ಹೇಳಿದ್ದಾರೆ.

**ನಾವೆಲ್ಲರೂ ಭೂಮಿತಾಯಕುಡಿಗಳೆಂದು ಇಂದೇ ಪಣ ತೊಡಿರಿ ಎಂದು ಕವಿ ಹೇಳಿದ್ದಾರೆ.**

3.ಕಳಸ, ಶಿಲುಬೆ,ಬಿಳಿಮಿನಾರು ಇವು ಯಾವ ಧರ್ಮದ ಸಂಕೇತಗಳಾಗಿವೆ.

**ಕಳಸು ಹಿಂದೂಗಳ,ಶಿಲುಬೆ ಕ್ರೈಸ್ತರ, ಬಿಳಿಮಿನಾರು ಮುಸ್ಲಿಮ್ ಧರ್ಮದ ಸಂಕೇತಗಳಾಗಿವೆ.**

4.ರಸ ಕವಿತ್ವ ಒಂದೆ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೊ ಪ್ರಕಾರಗಳು ಯಾವುವು?

**ರಸ ಕವಿತ್ವ ಒಂದೆ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೊ ಪ್ರಕಾರಗಳು:ಕಂದ, ವೃತ್ತ, ತ್ರಿಪದಿ,ವಚನ.**

5.ನಿತ್ಯೋತ್ಸವ ಕವಿ ಎಂದೇ ಪ್ರಸಿದ್ಧರಾಗಿರುವ ಕವಿ ಯಾರು?

**ನಿತ್ಯೋತ್ಸವ ಕವಿ ಎಂದೇ ಪ್ರಸಿದ್ಧರಾಗಿರುವ ಕವಿ ಕೆ.ಎಸ್. ನಿಸಾರ್ ಅಹಮದ್.**

## ❖ ಶಿಶುನಾಳ ಶರೀಫ ಸಾಹೇಬರು ಆರ್ ಎಸ್ ಸುಂಕದ

1.ಶರೀಫರು ಯಾವ ಮಾತನ್ನು ಹುಸಿಗೊಳಿಸಿದರು?

**ಶರೀಫರು ತತ್ತ್ವ ವಿವೇಚನೆ, ಶಾಸ್ತ್ರಶ್ರವಣ ಮುಂತಾದವುಗಳು ಕೇವಲ ಉಚ್ಚ ಜನರ ಸೊತ್ತೆಂಬ ಮಾತನ್ನು ಹುಸಿಗೊಳಿಸಿದರು.**

2.ಶರೀಫರು ಸ್ವಪ್ರಯತ್ನದಿಂದ ಏನನ್ನು ಕಲಿತರು?

**ಶರೀಫರು ಸ್ವಪ್ರಯತ್ನದಿಂದ ಉರ್ದು ಹಾಗೂ ಮೋಡಿಗಳನ್ನು ಕಲಿತರು?**

3.ತತ್ವಬೋಧನೆಯನ್ನು ಶರೀಫರು ಹೇಗೆ ಮಾಡಿದರು?

**ತತ್ವಬೋಧನೆಯನ್ನು ಶರೀಫರು ಸಾಮಾನ್ಯ ಮಾನವನಿಗೂ ಅರ್ಥವಾಗುವಂತೆ ಮಾಡಿದರು?**

4.ಶರೀಫರು ಭಾಗವಹಿಸುತಿದ್ದ ಇಸ್ಲಾಂ ಹಬ್ಬ ಮತ್ತು ಮೇಳಗಳಾವುವು? .

**ಶರೀಫರು ಭಾಗವಹಿಸುತಿದ್ದ ಇಸ್ಲಾಂ ಹಬ್ಬ ಮತ್ತು ಮೇಳಗಳು:ಮೊಹರಂ ಮತ್ತು ಅಲಾವಿ,ಕರ್ಬಲಾ ಆಚರಣೆಗಳು.**

5.ಶರೀಫರಿಗೆ ಸಹಿಸಲಾಗದ ಆಘಾತವಾಯಿತು ಏಕೆ?

**ಮಗಳ ಮತ್ತು ಹೆಂತಿಯ ಮರಣದಿಂದ ಶರೀಫರಿಗೆ ಸಹಿಸಲಾಗದ ಆಘಾತವಾಯಿತು.**

**6.**ಗುರು ಪಂಥ ಎಂದರೇನು?

**ಗುರುಗಳಲ್ಲಿ ಭಕ್ತಿ ಭಾವವನ್ನು ತೋರಿ ನಡೆಯುವುದು.**

## ❖ ಗ್ರಂಥಾಲಯದಲ್ಲಿ ಸಿ.ಪಿ.ಕೆ.

**1.**ಸಿ.ಪಿ.ಕೆಯವರು ಯಾವುದರ ಅಡಿಯಲ್ಲಿ ತಾನು ಧೂಳ ಕಣವಾಗಿ ಬಿಡುತ್ತೇನೆಂದು ಹೇಳಿದ್ದಾರೆ?

**ಸಿ.ಪಿ.ಕೆ.ಯವರುಪುಸ್ತಕ ರಾಶಿಗಳ ಅಡಿಯಲ್ಲಿ ತಾನು ಧೂಳ ಕಣವಾಗಿ ಬಿಡುತ್ತೇನೆಂದು ಹೇಳಿದ್ದಾರೆ.**

**2.**ಕವಿಯು ತನ್ನ ಮತಿ ಎಲ್ಲಿ ಮುದುಡಿ ಹೊಗುತ್ತದೆ ಎಂದಿದ್ದಾರೆ?

**ಕವಿ ಸಿ.ಪಿ.ಕೆ.ಯವರು ತನ್ನ ಮತಿ ಗ್ರಂಥಾಲಯದಲ್ಲಿ ಮುದುಡಿ ಹೊಗುತ್ತದೆ ಎಂದಿದ್ದಾರೆ.**

**3.**ಅಹಂಕಾರವನ್ನು ನುಚ್ಚುನೂರಾಗಿಸುವ ತಾಣ ಯಾವುದೆಂದು ಸಿ.ಪಿ.ಕೆ.ಯವರು ಹೇಳಿದ್ದಾರೆ?

**ಅಹಂಕಾರವನ್ನು ನುಚ್ಚುನೂರಾಗಿಸುವ ತಾಣ ಗ್ರಂಥಾಲಯವೆಂದು ಸಿ.ಪಿ.ಕೆ.ಯವರು ಹೇಳಿದ್ದಾರೆ.**

**4.**ಸಿ.ಪಿ.ಕೆಯವರು ಗ್ರಂಥಗಳನ್ನು ಯಾವುದರ ಪಳೆಯುಳಿಕೆ ಎಂದಿದ್ದಾರೆ?

**ಸಿ.ಪಿ.ಕೆಯವರು ಗ್ರಂಥಗಳನ್ನು ಹಿರಿಯರ ಬಾಳುಗಳ ಪಳೆಯುಳಿಕೆ ಎಂದಿದ್ದಾರೆ.**

**5.**ಭೀತವಿಸ್ಮಿತರಾದ ಕವಿ ಯಾರ ಹಾಗೆ ತತ್ತರಿಸಿದರು?

**ಭೀತವಿಸ್ಮಿತರಾದ ಕವಿ ಪಾರ್ಥನಂತೆ ತತ್ತರಿಸಿದರು?**

## ❖ ಧ್ವಜ ರಕ್ಷಣೆ ಎಸ್. ಆರ್. ರೋಹಿಡೇಕರ್

**1.**ಮೋಹನ ಪುರದಲ್ಲಿ ನಡೆದ ಚಳುವಳಿ ಯಾವುದು?

**ಮೋಹನಪುರದಲ್ಲಿ ನಡೆದ ಚಳುವಳಿ ಚಲೇ ಜಾವ್ ಚಳುವಳಿ**

**2.**ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು?

**ಗಾಂಧೀಜಿಯವರು ಕೊಟ್ಟ ಮಂತ್ರ 'ಮಾಡು ಇಲ್ಲವೆ ಮಡಿ' ಎಂಬುದು.**

**3.**ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯವರು ಏನು ಮಾಡಿದರು?

**ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯವರು ಗಾಳಿಯಲ್ಲಿ ಗುಂಡು ಹಾರಿಸಿದರು.**

4.ಮೋಹನ ಪುರದ ಪರಿಸ್ಥಿಯನ್ನು ನಿಯಂತ್ರಿಸಲು ಡಿ. ಎಸ್ ಪಿ. ಏನು ಮಾಡಿದರು?

**ಮೋಹನ ಪುರದ ಪರಿಸ್ಥಿಯನ್ನು ನಿಯಂತ್ರಿಸಲು ಡಿ. ಎಸ್ ಪಿ. ಅವರು ತಮ್ಮ ಇಲಾಖೆಯ ನಿಷ್ಠಾವಂತ ಅಧಿಕಾರಿ ಮಿ. ಕುಲಕರ್ಣಿಯವರನ್ನು ಅಲ್ಲಿಗೆ ಕಳುಹಿಸಿದರು**

5. ರಾಮಸಿಂಗ್ ಶಿಪಾಯಿಗಳಿಗೆ ಯಾವ ಮಾತನ್ನು ಸೆರಗಿಗೆ ಗಂಟು ಹಾಕಿಕೊಳ್ಳುವಂತೆ ಹೇಳಿದನು?

**ರಾಮಸಿಂಗ್ ಶಿಪಾಯಿಗಳಿಗೆ "ನೀವುನೌಕಕರಲ್ಲ ಗುಲಾಮರು; ಜನರೊಪ್ಪದೆ, ಬ್ರಿಶಷರ ಆಟ ಇನ್ನು ಭಾರತದಲ್ಲಿ ನಡೆಯಲಾರದು" ಇದನ್ನು ಸೆರಗಿಗೆ ಗಂಟು ಹಾಕಿಕೊಳ್ಳಿ ಎಂದು ಹೇಳಿದನು.**

❖ ಬಸವಣ್ಣನವರ ವಚನಗಳು--ಬಸವಣ್ಣ

1.ಬಸವಣ್ಣನವರು ಹೇಳಿರುವಂತೆ ದೇವರನ್ನು ಒಲಿಸುವ ಪರಿ ಯಾವುದು?

**ಕಳ್ಳತನ ಮಾಡಬಾರದು, ಕೊಲೆ ಮಾಡಬಾರದು,ಸುಳ್ಳನ್ನು ಹೇಳಬಾರದು,ಕೋಪಿಸಿಕೊಳ್ಳಬಾರದು,ಅನ್ಯರಿಗೆ ಅಸಹ್ಯ ಪಡಬಾರದು, ತನ್ನ ಬಣ್ಣಿಸಬಾರದು, ಇನ್ನೊಬ್ಬರನ್ನು ಹಳಿಯಬಾರದು ಈ ರೀತಿ ಅಂತರಂಗ ಮತ್ತು ಬಹಿರಂಗ ಶುದ್ಧಿಯಿಂದ ದೇವರನ್ನು ಒಲಿಸಿಕೊಳ್ಳಬೇಕು.**

2.ದೇವಲೋಕ, ಮರ್ತ್ಯ ಲೋಕವೆಂದು ಬೇರೆ ಎಲ್ಲೂ ಇಲ್ಲವೆಂಬುದನ್ನು ಬಸವಣ್ಣನವರು ಹೇಗೆ ನಿರೂಪಿಸಿದ್ದಾರ?

**ದೇವಲೋಕ, ಮರ್ತ್ಯ ಲೋಕವೆಂದು ಬೇರೆ ಎಲ್ಲೂ ಇಲ್ಲವೆಂಬುದನ್ನು ಬಸವಣ್ಣನವರು "ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ" ಎನ್ನುವುದರ ಮೂಲಕ ನಿರೂಪಿಸಿದ್ದಾರೆ.**

3.ಅಂತಶುದ್ಧಿಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂದು ಬಸವಣ್ಣನವರು ತಿಳಿಸಿದ್ದಾರೆ?

**ಕಳ್ಳತನ ಮಾಡಬಾರದು, ಕೊಲೆ ಮಾಡಬಾರದು,ಸುಳ್ಳನ್ನು ಹೇಳಬಾರದು,ಕೋಪಿಸಿಕೊಳ್ಳಬಾರದು,ಅನ್ಯರಿಗೆ ಅಸಹ್ಯ ಪಡಬಾರದು, ತನ್ನ ಬಣ್ಣಿಸಬಾರದು, ಇನ್ನೊಬ್ಬರನ್ನು ಹಳಿಯಬಾರದು ಈ ರೀತಿ ಅಂತರಂಗಶುದ್ಧಯನ್ನು ಮಾಡಿಕೊಳ್ಳಬೇಕು.**

**4**.ಸ್ವರ್ಗ ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರ ಯಾವುದು?

**ಸ್ವರ್ಗ ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರ ಆಚಾರವೇ ಸ್ವರ್ಗ ಅನಾಚಾರವೇ ನರಕ.**

## ❖ ಕರ್ನಾಟಕದ ವೀರ ವನಿತೆಯರು ಡಾ.ವಿಜಯಲಕ್ಷ್ಮಿ ಬಾಳೇ ಕುಂದ್ರಿ

**1**.ಪೋರ್ಚುಗೀಸರು ಕೇಳಿದ ಬೆಲೆಗೆ ವಸ್ತುಗಳನ್ನು ಕೊಡಲು ಅಬ್ಬಕ್ಕದೇವಿಯು ಏಕೆ ಒಪ್ಪಲಿಲ್ಲ?

**ರೈತರು ಕಷ್ಟಪಟ್ಟು ಬೆವರು ಸುರಿಸಿ ಬೆಳೆಯನ್ನು ಬೆಳೆದಿದ್ದರಿಂದ ಪೋರ್ಚುಗೀಸರು ಕೇಳಿದ ಕಡಿಮೆ ಬೆಲೆಗೆ ವಸ್ತುಗಳನ್ನು ಕೊಡಲು ರಾಣಿ ಅಬ್ಬಕ್ಕದೇವಿಯು ಒಪ್ಪಲಿಲ್ಲ.**

**2**.ಮಲ್ಲಮ್ಮಾಜಿಯ ಪರಾಕ್ರಮದಲ್ಲಿ ಈಶಪ್ರಭುವಿಗೆ ಅಪಾರ ನಂಬಿಕೆ ಇತ್ತು ಏಕೆ?

**ಮಲ್ಲಮ್ಮಾಜಿಯು ಈ ಹಿಂದೆ ಎರಡು ಹುಲಿಗಳನ್ನು ಸಾಯಿಸಿದ್ದರಿಂದ ಅವಳ ಪರಾಕ್ರಮದಲ್ಲಿ ಈಶ ಪ್ರಭುವಿಗೆ ಅಪಾರ ನಂಬಿಕೆ ಇತ್ತು.**

**3**.ವಿಜಯೋತ್ಸವದ ಸಂಭ್ರಮದಲ್ಲಿದ್ದ ಮಲ್ಲಮ್ಮಾಜಿಗೆ ಆಘಾತವಾಯಿತು ಏಕೆ?

**ಮಲ್ಲಮಾಜಿಯು ಯುದ್ಧ ಮಾಡಲು ಅತ್ತ ಹೋದಾಗ ಇತ್ತ ಈಶಪ್ರಭುವನ್ನು ಮರಾಠ ಸೈನಿಕರು ಗಾಯಗೊಳಿಸಿದ್ದರಿಂದ ವಿಜಯೋತ್ಸವದ ಸಂಭ್ರಮದಲ್ಲಿದ್ದ ಮಲ್ಲಮ್ಮಾಜಿಗೆ ಆಘಾತವಾಯಿತು.**

**4**.ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೇ ಏಕೆ ಬಂದರು?

**ಭರತದಲ್ಲಿ ಏಲಕ್ಕಿ,ಮೆಣಸಿನಕಾಳು ಮುಂತಾದ ಮಸಾಲೆ ಸಾಮಾನುಗಳು ಕಡಿಮೆ ಬೆಲೆಗೆ ಸಿಗುವುದೆಂದು ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೇ ಬಂದರು.**

**5**.ದೇಸಾಯಿ ಈಶಪ್ರಭು ಕಿಡಿಕಿಡಿಯಾದುದೇಕೆ?

**ಶಿವಾಜಿಯ ಸೈನಿಕರು ಹಳ್ಳಿಗರ ಹಸು ಎಮ್ಮೆಗಳನ್ನು ಅಪಹರಿಸಿ ಅವರಿಗೆ ಕಿರುಕುಳ ಕೊಡುತಿದ್ದರಿಂದ ದೇಸಾಯಿ ಈಶಪ್ರಭು ಕಿಡಿಕಿಡಿಯಾದರು.**

## ❖ ಉದರ ವೈರಾಗ್ಯ  ಪುರಂದರದಾಸರು

**1.**ಉದರ ವೈರಾಗ್ಯ ಎಂದರೇನು?

**ಹೊಟ್ಟೆಯ ಪಾಡಿಗಾಗಿ ಬೇರೆ ಬೇರೆ ವೇಷಗಳನ್ನು ಹಾಕುವುದು.**

**2.**ಪುರಂದರದಾಸರು ಯಾವುದನ್ನು ಉದರ ವೈರಾಗ್ಯವೆಂದಿದ್ದಾರೆ?

**ಪುರಂದರದಾಸರು ಕಪಟ ಭಕ್ತಿಯನ್ನು ಉದರ ವೈರಾಗ್ಯವೆಂದಿದ್ದಾರೆ?**

**3.**ಢಾಂಭಿಕ ಭಕ್ತನ ಮನಸ್ಸು ಯಾವ ಗುಣಗಳಿಂದ ತುಂಬಿದೆ ಎಂದು ಪುರಂದರದಾಸರು ಹೇಳಿದ್ದಾರೆ?

**ಢಾಂಭಿಕ ಭಕ್ತನ ಮನಸ್ಸು ಕಾಮ,ಕ್ರೋಧ,ಲೋಭ,ಮೋಹ,ಮದ,ಮತ್ಸರ ಮುಂತಾದ ಅರಿಷಡ್ವರ್ಗಗಳಿಂದ ತುಂಬಿದೆ ಎಂದು ಪುರಂದರದಾಸರು ಹೇಳಿದ್ದಾರೆ.**

**4.**ಪುರಂದಾಸರು ಢಾಂಭಿಕ ಭಕ್ತನ ದೇವರ ಕೋಣೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ?

**ಪುರಂದಾಸರು ಢಾಂಭಿಕ ಭಕ್ತನ ದೇವರ ಕೋಣೆಯನ್ನು ಕಂಚುಗಾರರ ಬಿಡಾರಕ್ಕೆ ಹೋಲಿಸಿದ್ದಾರೆ**

**5.**ಪುರಂದರದಾಸರ ಪದಗಳ ಅಂಕಿತ ಯಾವುದು?

**ಪುರಂದರದಾಸರ ಪದಗಳ ಅಂಕಿತ ಪುರಂದರ ವಿಠಲ.**

## ❖ ನನ್ನ ಪುಸ್ತಕ ಪ್ರಪಂಚ ಬೀಚಿ

**1.**ಇಂಗ್ಲಿಷ್‌ನ ಹೇಳಿಕೆಯೊಂದನ್ನು ಕೊಂಚ ಮಾರ್ಪಡಿಸಿ ಬೀಚಿಯವರು ಸೃಷ್ಟಿಸಿರುವ ಹೇಳಿಕೆ ಯಾವುದು?

**'ನಿನ್ನ ಮಿತ್ರರಾರು ಎಂಬುದನ್ನು ನನಗೆ ಹೇಳು,ನೀನೇನು ಎಂಬುದನ್ನು ಹೇಳುತ್ತೇನೆ ಇದನ್ನು ಕೊಂಚಮಾರ್ಪಡಿಸಿ ನೀನಾವ ಪುಸ್ತಕಗಳನ್ನು ಓದುತ್ತಿ ಎಂಬುದನ್ನು ಹೇಳು, ನಿನ್ನ ತಲೆ ಏನೆಂಬುದನ್ನು ಹೇಳುತ್ತೇನೆ'**

**2.**ಹುಬ್ಬಳ್ಳಿಯಲ್ಲಿ ಲೈಫ್ ಇನ್ ಷೂರೆನ್ಸ್ ಕಂಪನಿಯ ಏಜೆಂಟರ ಆಫೀಸಿನಲ್ಲಿ ಬೀಚಿಯವರ ನಿತ್ಯದ ಕಾರ್ಯಕ್ರಮ ಯಾವುದಾಗಿತ್ತು?

**ಆಫೀಸಿನಲ್ಲಿ ಕೆಲಸ ಇಲ್ಲದೆ ಇರುವುದರಿಂದ ಗೋವಿಂದರಾಯರ ಅಂಗಡಿಯಲ್ಲಿ ಕುಳಿತು ತವುಡು ಕಟ್ಟುವುದು ಅವರ ನಿತ್ಯದ ಕಾರ್ಯಕ್ರಮ.**

**3**.'ಸಂಧ್ಯಾರಾಗ' ಪುಸ್ತಕವನ್ನು ಬೀಚಿಯವರು ಏಕೆ ಓದಿದರು?

**ಬೀಚಿಯವರ ಹೆಂಡತಿ ತುಂಬಾ ಒತ್ತಾಯಮಾಡಿದ್ದರಿಂದ ಅವರು ಸಂಧ್ಯಾರಾಗ ಪುಸ್ತಕವನ್ನು ಓದಿದರು.**

**4**.ಟ್ರೇನಿನಲ್ಲಿ ಪುಸ್ತಕವನ್ನು ಬಚ್ಚಿಟ್ಟುಕೊಂಡು ಬೀಚಿಯವರು ಓದಲಾರಂಭಿಸಿದ್ದೇಕೆ?

**ಅಂದು ಎಲ್ಲರೂ ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗಿದ್ದರಿಂದ ಬೀಚಿಯವರು ಕನ್ನಡ ಪುಸ್ತಕವನ್ನು ಓದಿದರೆ ತನ್ನ ಮಾನ ಹೋಗುತ್ತದೆ ಎಂದು ರೈಲಿನಲ್ಲಿ ಕನ್ನಡ ಪುಸ್ತಕವನ್ನು ಬಚ್ಚಿಟ್ಟುಕೊಂಡು ಓದಲಾರಂಭಿಸಿದರು.**

**5**.ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದ ಶುಭಮೂಹೂರ್ತ ಯಾವುದು?

**ಕನ್ನಡದಲ್ಲಿ ಒಳ್ಳೊಳ್ಳೆಯ ಬರಹಗಾರರು ಇದ್ದಾರೆ ಎಂದು ತಿಳಿದ ಸಂದರ್ಭದಲ್ಲಿ ಬೀಚಿಯವರು ಕನ್ನಡದ ದೀಕ್ಷೆಯನ್ನು ಸ್ವೀಕರಿಸಿದರು.**

**6**.ಬೀಚಿಯವರೇ ಹೇಳಿರುವಂತೆ ಡಿ.ವಿ.ಜಿ.ಯವರ ತಿಮ್ಮನಿಗೂ ಬೀಚಿಯವರತಿಂಮನಿಗೂ ಇರುವ ವ್ಯತ್ಯಾಸವೇನು?

**ಡಿ.ವಿ.ಜಿಯವರ ತಿಮ್ಮ ಸೂರ್ಯ. ಬೀಚಿಯವರ ತಿಮ್ಮ 'ಬೆಡ್ ಲ್ಯಾಂಪ್'**

## ❖ <u>ಜನಪದಗೀತೆ</u>

**1**.ರೈತ ಮಳೆಯನ್ನು ಏನೆಂದು ಕರೆದಿದ್ದಾನೆ?

**ರೈತ ಮಳೆಯನ್ನು 'ಅಪ್ಪರು' ಎಂದು ಕರೆದಿದ್ದಾನೆ.**

**2**.ರೈತನಿಗೆ ಮೋಡಗಳು ಹೇಗೆ ಕಾಣುತಿದ್ದವು?

**ರೈತನಿಗೆ ಮೋಡಗಳು ಗೋಡೆಗೆ ಕಪ್ಪು ಬಣ್ಣವನ್ನು ಬಳಿದ ರೀತಿಯಲ್ಲಿ ಕಾಣುತಿದ್ದವು.**

**3**.ಎಲ್ಲಿ ಹೆಚ್ಚು ಮಳೆ ಸುರಿಯಬೇಕೆಂದು ರೈತನು ಕೇಳುತ್ತಾನೆ?

**ಬೆಟ್ಟದ ಮೇಲೆ ಹೆಚ್ಚು ಮಳೆ ಸುರಿಯಬೇಕೆಂದು ರೈತನು ಕೇಳುತ್ತಾನೆ.**

**4**.ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ?

**ಸ್ವಾತಿಮಳೆ ಸುರಿದರೆ ಕೆರೆಗಳು ತುಂಬುತ್ತವೆ.**

*****************************************************************************